ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ	102
ಸದಸ್ಯರ ಹೆಸರು	ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	15.9.2021
ಉತ್ತರಿಸುವ ಸಚಿವರು	ಮಾನ್ಯ ಲೋಕೋಪಯೋಗಿ ಸಚಿವರು

	ಪ್ರಶ್ನೆಗಳು	ಉತ್ತರಗಳು
(ಅ)	ಕಾರವಾರ ಜಿಲ್ಲೆಯ ಜೋಯಿಡಾ ತಾಲ್ಲೂಕಿನ ಅಣಶಿ ಹೆದ್ದಾರಿಯಲ್ಲಿ ಕಳೆದ ಜುಲೈ ತಿಂಗಳಿನಲ್ಲಿ ಸುರಿದ ಮಳೆಯಿಂದಾಗಿ ಭೂಕುಸಿತ ಉಂಟಾಗಿ ರಸ್ತೆ ಸಂಚಾರ ಸಂಪೂರ್ಣ ನಿಲುಗಡೆಯಾಗಿ ತಿಂಗಳು ಸಮೀಪಿಸುತ್ತಿದ್ದರೂ ಇಲ್ಲಿಯವರೆಗೆ ಇನ್ನೂ ಸಂಚಾರ ಭಾಗ್ಯ ಲಭಿಸದೇ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ: (ವಿವರ ನೀಡುವುದು)	2021ರ ಜುಲೈ ಹಾಗೂ ಅಗಸ್ಟ್ ತಿಂಗಳಲ್ಲಿ ಸತತ ಸುರಿದ ಮಳೆಯಿಂದಾಗಿ ಜೋಯಿಡಾ ತಾಲ್ಲೂಕಿನಲ್ಲಿ ಹಾದುಹೋಗಿರುವ ಔರಾದ ಸದಾಶಿವಗಡ ರಾಜ್ಯ ಹೆದ್ದಾರಿ–34 ರ ಭಾಗವಾದ ರಾಮನಗರ ಜೋಯಿಡಾ ಅಣಸಿ ರಸ್ತೆಯ ಕಿಮೀ. 645.54 ರಲ್ಲಿ 30 ಮೀ ಆಳಕ್ಕೆ ರಸ್ತೆ ಬದಿ ಭೂಮಿ ಕುಸಿದಿದ್ದರೂ 5.50 ಮೀ ಅಳತೆಯ ಕ್ಯಾರೇಜವೇಗೆ ಯಾವುದೇ ತೆರನಾದ ಹಾನಿ ಉಂಟಾಗಿಲ್ಲವಾದ್ದರಿಂದ, ಮುನ್ನೆಚ್ಚರಿಕೆ ಕ್ರಮವಾಗಿ ಸದರಿ ಚೈನೇಜಿನಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿಸಿ 3.75 ಮೀ ಅಗಲದ ರಸ್ತೆಯಲ್ಲಿ ಸಾರ್ವಜನಿಕ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ. ಜೋಯಿಡಾ ತಾಲ್ಲೂಕಿನಲ್ಲಿ ಹಾದುಹೋಗಿರುವ ಸದರಿ ರಾಜ್ಯ ಹೆದ್ದಾರಿಯ ಕಿ.ಮೀ 688.80 ಮತ್ತು 688.10 ರಲ್ಲಿ ಗುಡ್ಡ ಕುಸಿತ ಉಂಟಾಗಿದ್ದು, ಈ ಭಾಗದಲ್ಲಿ 4 ಕಡೆಗಳಲ್ಲಿ ಕುಸಿದಿರುವ ಗುಡ್ಡವನ್ನು ತೆರವುಗೊಳಿಸಲಾಗಿರುತ್ತದೆ. ಇನ್ನುಳಿದ ಎರಡು ಕಡೆಗಳಲ್ಲಿ ರಸ್ತೆಯ ಮೇಲೆ ಭಾರಿ ಪ್ರಮಾಣದ ಮಣ್ಣು ಶೇಖರಣೆಯಾಗಿದ್ದು ಪಾರ್ಶ್ವ ಭಾಗದಲ್ಲಿ ದೊಡ್ಡ ಕಂದಕ ಉಂಟಾಗಿರುತ್ತದೆ. ರಸ್ತೆಯಲ್ಲಿ ಬಿದ್ದ ಮಣ್ಣನ್ನು ತೆರವುಗೊಳಿಸಿ ವಾಹನ ಸಂಚಾರಕ್ಕೆ ಅನುವುಮಾಡಿಕೊಡುವ ಪೂರ್ವ ಭಾರಿ ಕುಸಿತದ ಪರಿಣಾಮಗಳ ಕುರಿತು ತಾಂತ್ರಿಕ ಪರಿಣಿತರು ಹಾಗೂ ಭೂಗರ್ಭಶಾಸ್ತ್ರಜ್ಞರ ಸಲಹೆ ಪಡೆದು ಅದರಂತೆ ಸಾರ್ವಜನಿಕರಿಗೆ ಮತ್ತು ಲಘುವಾಹನಗಳ ಓಡಾಟಕ್ಕೆ ಅವಕಾಶ ಕಲ್ಪಿಸಲಾಗಿರುತ್ತದೆ.
(ಆ)	ಹಳಿಯಾಳ ದಾಂಡೇಲಿ ಜೋಯಿಡಾ, ರಾಮನಗರ ಮುಂತಾದ ತಾಲ್ಲೂಕಿನ ಜನರು ತಮ್ಮ ದಿನ ನಿತ್ಯದ ಕಾರ್ಯಗಳಿಗೆ ಜಿಲ್ಲಾ ಕೇಂದ್ರವಾದ ಕಾರವಾರಕ್ಕೆ ಹೋಗಬೇಕಾಗಿದ್ದು, ಸದರಿ ಅಣಶಿ ರಸ್ತೆಯಲ್ಲಿ ಭೂಕುಸಿತ ಉಂಟಾಗಿ ಕಾರವಾರಕ್ಕೆ ಹೋಗುವುದು ಸ್ಥಗಿತಗೊಂಡಿರುವುದರಿಂದ ಸಾರ್ವಜನಿಕರಿಗೆ ಕಚೇರಿ ಕಾರ್ಯ ಆರೋಗ್ಯ ಮತ್ತು ಇತರೇ ಚಟುವಟಿಕೆಗಳಿಗೂ ಹೋಗಲು ಅಣಶಿ ಗುಡ್ಡ ಹತ್ತಿ ಕದ್ರಾ ಮಾರ್ಗವಾಗಿ ಕಾರವಾರ ತಲುಪಬೇಕಾದ ಪ್ರಯುಕ್ತ, ಈ ರಸ್ತೆ ರಿಪೇರಿ ಕಾರ್ಯ ಮಾಡಲು ಸರ್ಕಾರಕ್ಕೆ ಎಷ್ಟು ಕಾಲಾವಕಾಶ ಬೇಕಾಗುತ್ತದೆ? (ವಿವರ ನೀಡುವುದು.)	

ಲೋಇ 74 ಸಿಕ್ಯೂಎನ್ 2021(ಇ)

(ಸಿ.ಸಿ. ಪಾಟೀಲ)
ಲೋಕೋಪಯೋಗಿ ಸಚಿವರು